# ಸಿಡುಕುಮೋರೆಯ ಹಿಂದೆ ಎರಡು ಸಾವುಗಳ ನೆರಳು!

'ಮುಂಚಿಂದ ಅವನು ಹಿಂಗಿದ್ದೋನಲ್ಲ. ಅವನ ಅಪ್ಪ ಹೋದಾಗ ಅವನಿಗೆ ಎಷ್ಟೊರ್ಷ ಅಂತಿ? ಇನ್ನೂ ಹದಿನೈದು ತುಂಬಿತ್ತು ಕಣೇ. ಓದ್ಕಂಡಿರೋ ವಯಸ್ಸಲ್ಲಿ ಇಡೀ ಮನೆ ಜವಾಬ್ದಾರಿ ತಲೇ ಮೇಲೆ ಕಡ್ಕೊಂಡು ಬಿತ್ತು. ದೋರೆಗಾಯೀನ ಹಿಚುಕಿ ಹಣ್ಣು ಮಾಡಿದ್ರೆ ಹೆಂಗಿರುತ್ತೆ ಹೇಳು? ಮೇಲೆ ಕಾಣೋಕೆ ಮೆತ್ತಗಾಗಿರೋ ಹಣ್ಣು. ಒಳಗೆ ಹುಳಿ. ಇವನು ಪಾಪದೋನಾಗಿದ್ರೆ ಜನ ಹುರಿದು ಮುಕ್ಕಿಬಿಡ್ತಿದ್ರು. ಜೋರಾಗ್ದೆ ವಿಧಿ ಇರ್ಲಿಲ್ಲ ಇವಂಗೆ. ಆಮೇಲಾಮೇಲೆ ಅದೇ ಅಭ್ಯಾಸ ಆಯ್ತು...' ವೆಂಕಮ್ಮ ಹಳೇಪುರಾಣ ಬಿಚ್ಚಿಟ್ಟಿದ್ದರು.

'ಅಷ್ಟೇ ಅಲ್ಲ ಅತ್ಗೆ, ಕಮಲಕ್ಕಂದು ಅತಂತ್ರ ಆಗಿ ಕೂತ್ಗಂತಲ್ಲ, ಇವನಿಗೆ ತಲೆ ಹನ್ನೆರಡಾಣೆ ಆಗ್ದಿದ್ದು ಹೆಚ್ಚು...' ವೆಂಕಟರಾಮು ಹೇಳಿದ್ದ.

ಸೀತಾಲಕ್ಷ್ಮಿಯನ್ನು ಎಲ್ಲಾ ಸೇರಿ ಸಂತೈಸಿದ್ದರು. ಯಾವಾಗೆಂದರೆ ಆವಾಗ ಪ್ರಕೋಪಕ್ಕೆ ತಲುಪುವ ಶಿವರಾಮನ ಅಸಹನೆಗೆ ಕಾರಣ ತಿಳಿಸಿದ್ದರು. 'ಪಾಪ...' ಅನಿಸಿತ್ತು ಸೀತಾಲಕ್ಷ್ಮಿಗೆ. ಎಳೆಹುಡುಗನ ಹೆಗಲಿಗೆ ಮಣಭಾರ ಬಿದ್ದರೆ ಕುಸಿದು ಹೋಗುವುದರಲ್ಲಿ ಆಶ್ಚರ್ಯವೇನಿಲ್ಲ ಅನಿಸಿತ್ತು. ಅವಳಿಗೆ ಅಗತ್ಯವಾದ ಸಾಂತ್ವನ ಆ ಕ್ಷಣದಲ್ಲಿ ಸಿಕ್ಕಿತ್ತು. ಸಮಾಧಾನದಿಂದ ಹೊಟ್ಟೆ ತುಂಬಾ ಉಂಡಿದ್ದಳು ಸೀತಾಲಕ್ಷ್ಮಿ.

ಸೀತಾಲಕ್ಷ್ಮಿಯ ಮದುವೆಯಾಗುವುದಕ್ಕಿಂತ ಹತ್ತಿಪ್ಪತ್ತು ವರ್ಷ ಮುಂಚಿನ ಕಾಲ ಅದೆಂಥ ಕೆಟ್ಟ ಕಾಲವಾಗಿತ್ತು ಅಂದರೆ, ಬೆಳೆದು ನಿಂತ ಹುಡುಗಿಯರ ಲಗ್ನ ಮಾಡುವುದು ಅಂದರೆ ದೊಡ್ಡ ಯಜ್ಞ. ಬೆಳೆದು ನಿಲ್ಲುವುದು ಅಂದರೇನು? ಮೈನೆರೆದು ಕೂತರೆ ಬೆಳೆದು ನಿಂತ ಅರ್ಥ. ಆದಷ್ಟು ಬೇಗ ಮನೆಮಗಳನ್ನು ದಾಟಿಸಿ ಕೈ ತೊಳೆದುಕೊಳ್ಳುವ ಅವಸರ. ಮೈ ನೆರೆಯುವ ಮೊದಲೇ ಮದುವೆ ಮಾಡಿದ ಉದಾಹರಣೆಗಳು ಬೇಕಾದಷ್ಟು. ಜಾತಕದ ಹೊಂದಾಣಿಕೆಯಾದರೆ ಸಾಕು, ಮದುಮಗನಾಗುವವನ ವಯಸ್ಸು ದೊಡ್ಡದಾಗಿ ಕಾಣುತ್ತಿರಲಿಲ್ಲ. ಹುಡುಗಿಯ ಅಪ್ಪನ ವಯಸ್ಸಾಗಿದ್ದರೂ ಸೈ, ಎರಡನೆಯ, ಮೂರನೆಯ ಸಂಬಂಧವಾದರೂ ಸೈ, ಹುಲ್ಲು, ನೀರು ಇರುವ ಕಡೆ ನೋಡಿ ಕಟ್ಟಿದರೆ ಅದು ಹುಡುಗಿಯ ಭಾಗ್ಯ. ಹೀಗಿರುವ ಕಾಲಮಾನದಲ್ಲಿ ಮನೆಮನೆಯಲ್ಲೂ ಗಂಡನನ್ನು ಕಳೆದುಕೊಂಡ ವಿಧವೆಯರು ಒಂದಿಬ್ಬರಾದರೂ ಇರುತ್ತಿದ್ದರೆಂದರೆ ಆಶ್ಚರ್ಯವಲ್ಲ. ಇಲ್ಲದಿದ್ದರೆ ಅದೇ ಆಶ್ಚರ್ಯ. 'ಕಷ್ಟಾನೋ, ಸುಖಾನೋ ಹೊಕ್ಕ ಮನೇಲೇ ಬದುಕು ಮಾಡುತ್ತೇನೆ' ಎಂದು ಗಂಡನ ಮನೆಗೆ ಕಾಯಮ್ಮಾಗಿ ಕಚ್ಚಿಕೊಂಡವರಿರುತ್ತಿದ್ದರು.

'ಜೀವನಾಂಶ ಕೇಳಣ ಕಣೇ, ಅಷ್ಟೋ ಇಷ್ಟೋ ಕೊಡ್ದೆ ಇರ್ತಾರಾ? ಯಾರಿದಾರೆ ಅಂತ ಅಲ್ಲಿ ಜೀವ ಸಮೆಸ್ತಿ?' ಆ ಸಂದರ್ಭದ ಸಹಾನುಭೂತಿಯಿಂದ ಒಡಹುಟ್ಟಿದವರು ತೌರಿಗೆ ಆಹ್ವಾನಿಸಿದರೆ ಹೆಚ್ಚಿನವರು ನಿರಾಕರಿಸುತ್ತಿದ್ದುದಕ್ಕೆ ಸಕಾರಣ ಇರುತ್ತಿತ್ತು. ಎಲ್ಲಿ ಹೋದರೂ ರಟ್ಟೆಮುರಿ ಗೆಯ್ತ ತಪ್ಪಿದ್ದಲ್ಲ. ಮಧ್ಯಾಹ್ನದ ಒಂದು ಊಟ, ರಾತ್ರಿ ಒಂದು ಮುಷ್ಟಿ ಅವಲಕ್ಕಿಗೆ ಭಾಜನರಾದವರು ಎಲ್ಲಿದ್ದರೇನು? ಕೂರಿಸಿ ಅನ್ನ ಹಾಕುತ್ತೇವೆಂದು ತೌರಿಗೆ ಕರೆದುಕೊಂಡು ಬಂದವರಿಗೆ ಮನೆ ತಪ್ಪಿದ ಹೆಣ್ಣಿನ ಕುರಿತು ಕ್ರಮೇಣ ಸಸಾರ. ಒಡಹುಟ್ಟಿದವರ ಕಿಮಿ ತಿರುಪಲು ಅವರವರ ಹೆಂಡಂದಿರು ಇದ್ದೇ ಇರುತ್ತಾರಲ್ಲ? ಗತಿ ಇಲ್ಲದೆ ಬಂದು ಸೇರಿಕೊಂಡವರೆಂದರೆ ಎಂಥವರಿಗೂ ನಿರ್ಲಕ್ಷ್ಯ. ಎಷ್ಟು ಕೆಲಸ ಮಾಡಿದರೂ ಕಮ್ಮಿ. ಕೂತರೆ ತಪ್ಪು, ನಿಂತರೆ ತಪ್ಪು. ಹಾಗೂ ಪ್ರೀತಿ ತೋರಿಸುವವರು ಇರುತ್ತಲೇ ಇರಲಿಲ್ಲ ಅಂತಲ್ಲ, ಇರುತ್ತಿದ್ದರು ಅಪರೂಪಕ್ಕೆ. ಗಂಡನ ಮನೆಯಿಂದ ಜೀವನಾಂಶ ಬರುತ್ತದೆಯೆಂದು ನಂಬಿಕೊಂಡು ತೌರು ಸೇರಿಕೊಂಡವರಿಗೆ ಆಮೇಲೆ ಅದೂ ನಾಸ್ತಿ. ಒಂದೆರಡು ವರ್ಷ ಕೊಟ್ಟ ಹಾಗೆ ಮಾಡುವುದು, ಸ್ಟ್ಯಾಂಪ್ ಪೇಪರಿನ ಮೇಲೆ ಹೆಬ್ಬೆಟ್ಟು ಒತ್ತಿಸಿಕೊಳ್ಳುವುದು. ಮುಂದೆ ದುಡ್ಡಿರಲಿ, ಅದರ ವಾಸನೆ ಕೂಡಾ ಇಲ್ಲ. ಪೇಪರಿನ ಮೇಲೆ ಮನೆಯವರದೇ ಹೆಬ್ಬೆಟ್ಟು. ಅವರ ಪೈಕಿಯವರದೇ

